*2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು*
*ಸಿ.ಸಿ. ಸಂಖ್ಯೆ:148/2021*

*ಫಿರ್ಯಾದಿ :* ಹೇಮವತಿ ಎಂ ಬಿ ಕೋಂ ಕೃಷ್ಣ ಸಿ.,*38* ವರ್ಷ,
ಹೆಚ್.ಎನ್.ಎಂ.ಎಸ್.ಬಿ.ಆರ್. ಚೀಟ್ಸ್ ಮತ್ತು ಫೈನಾನ್ಸ್,
ಎನ್‌ಐಜಿ-*15*, ಬಸವನಗುಡಿ ಬ್ಲಾಕ್, ನಂಜನಗೂಡು ಟೌನ್.

*ವಿರುದ್ಧ*

*ಆರೋಪಿ :* ರಾಧಕೃಷ್ಣ ನಾಯರ್ ಸಿ/ಓ ನೆಸ್ಲೆ ಮಾದಯ್ಯ ಹೌಸ್, *40* ವರ್ಷ,
ವಾಸಃ ಶ್ರೀಕೃಪಾ, ಹನುಮಂತಪ್ಪ ಮಿಲ್ ಹಿಂಭಾಗ,
ನಂಜನಗೂಡು ಟೌನ್.

*: ಆರೋಪಣೆ :*

ಶ್ರೀಮತಿ ಶಶಿಕಲಾ ಜಿ, *ಬಿ.ಎ,* ಎಲ್‌ಎಲ್‌ಬಿ *2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ನಂಜನಗೂಡು,* ಆದ ನಾನು *ನಿಮ್ಮ ಮೇಲೆ ಈ ಕೆಳಕಂಡ ಆಪಾದನೆಯನ್ನು ಹೊರಿಸುವುದೇನೆಂದರೇ:*

ಮೇಲ್ಕಂಡ ಆರೋಪಿಯಾದ ನೀವು ಫಿರ್ಯಾದುದಾರರ ಫೈನಾನ್ಸ್ ನಲ್ಲಿ ನೀವು ನಿಮ್ಮ ದರದು ನಿಮಿತ್ತ ಅಂದರೆ ಕುಟುಂಬದ ನಿರ್ವಹಣೆಗಾಗಿ ಹಾಗೂ ಕೈಸಾಲವನ್ನು ತೀರಿಕೊಳ್ಳುವ ಸಲುವಾಗಿ ಹಣದ ಅವಶ್ಯಕತೆ ಇದೆ ಎಂದು ಫಿರ್ಯಾದುದಾರರಿಂದ ದಿ:**11.06.2016** ರಂದು ರೂ.**2,00,000/-**ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೀರಿ, ಸದರಿ ಮೊಬಲಗನ್ನು **01** ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತೀರಿ. ಸದರಿ ಮೊಬಲಗಿನ ಮರುಪಾವತಿಗಾಗಿ ಆರೋಪಿಯಾದ ನೀವು ಉಳಿತಾಯ ಖಾತೆ ಹೊಂದಿರುವ ಕ್ಯಾಥೋಲಿಕ್ ಸಿರಿಯನ್ ಬ್ಯಾಂಕ್, ನಂಜನಗೂಡು ಶಾಖೆ, ಚಕ್ ನಂ:**794342** ಗೆ ರೂ.*2,00,000/-* ಗಳನ್ನು ದಿನಾಂಕ:**03.11.2016** ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚಕ್ಕನ್ನು ನಗದೀಕರಿಸಿಕೊಳ್ಳಲು ತಮ್ಮ ಉಳಿತಾಯ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ''ಅಕೌಂಟ್ ಕ್ಲೋಸ್ಡ್ ಎಂಬ ಹಿಂಬರಹದೊಂದಿಗೆ ದಿ:**10.01.2017** ರಂದು ನಗಧೀಕೃತಗೊಳ್ಳದೆ ತಿರಸ್ಕೃತಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಅನಂತರ ಪಿರ್ಯಾದುದಾರರು

ಮೇಲ್ಕಂಡ ವಿಷಯವನ್ನು ನಮೂದಿಸಿ ವಕೀಲರ ಮೂಲಕ ನಿಮಗೆ ದಿ*24.01.2017* ರಂದು ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸ್ ಖುದ್ದು ಜಾರಿಯಾಗಿದ್ದು, ಈ ಸಂಬಂಧ ನೀವು ಯಾವುದೇ ಕ್ರಮ ಕೈಗೊಳ್ಳದೇ ಇದ್ದುದರಿಂದ ಆರೋಪಿಯಾದ ನೀವು ನೀವು ವರ್ಗಾವಣೆ ಲಿಖಿತ ಅಧಿನಿಯಮ ಕಲಂ *138* ರಡಿಯಲ್ಲಿ ದಂಡನೀಯವಾದ ಅಪರಾದವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಅಪಾದಿಸಲಾಗಿದೆ.

*ಪ್ರಶ್ನೆ-1 : ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ?*

*ಉತ್ತರ :*

*ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ* ಪ್ರತಿರಕ್ಷೆ ಮಾಡಿಕೊಳ್ಳುವಿರೋ *?*
*ಉತ್ತರ :*

*(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಕನ್ನಡದಲ್ಲಿ ಓದಿ ಹೇಳಿ ನಂತರ ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆಯೆಂದು ದಿನಾಂಕ 16.11.2022 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ).*

ಸಹಿ/-
*2ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.*
*ನಂಜನಗೂಡು*